ಕನ್ನಡವನ್ನು ಶ್ರೀಮಂತವಾಗಿಸಿದ ಇಂಗ್ಲಿಷ್ ಪ್ರಾಧ್ಯಾಪಕರ ಪರಂಪರೆಗೆ ಸೇರಿದ ಆಮೂರರು ಈ ಕೆಲಸವನ್ನು ಸೃಜನಶೀಲ ಬರವಣಿಗೆಯಲ್ಲಿ ತೊಡಗಿಕೊಳ್ಳದೆಯೂ ಮಾಡಿದರು. ಬೇಂದ್ರೆಯವರಿಂದ ಮೊದಲಾಗಿ ಶಾಂತಿನಾಥ ದೇಸಾಯಿಯವರವರೆಗೆ ಕಳೆದ ಶತಮಾನದಲ್ಲಿ ಉತ್ತರ ಕರ್ನಾಟಕದಿಂದ ವಲಸೆ ಹೋದ ಅಧ್ಯಾಪಕ ಸಮುದಾಯದ ಭಾಗವಾದ ಆಮೂರರು ಔರಂಗಾಬಾದಿನ ಮರಾಠವಾಡ ವಿಶ್ವವಿದ್ಯಾಲಯದಲ್ಲಿ ಹಲವು ವರ್ಷಗಳು ಇಂಗ್ಲಿಷ್ ಕಲಿಸಿದರು. ಆ ಕಾಲಘಟ್ಟದಲ್ಲಿ ಇಡೀ ದೇಶದಲ್ಲಿ ನಡೆಯುತ್ತಿದ್ದ ಇಂಗ್ಲಿಷ್ ಅಧ್ಯಯನ, ಸಾಹಿತ್ಯಸೃಷ್ಟಿ ಮತ್ತು ಸಾಹಿತ್ಯವಿಮರ್ಶೆಗಳಲ್ಲಿ ಅವರು ತೀವ್ರವಾದ ಆಸಕ್ತಿ ತಳೆದರು, ಪಾಶ್ಚಾತ್ಯ ತಿಳಿವಳಿಕೆಯನ್ನು ರಕ್ತಗತವಾಗಿ ಮಾಡಿಕೊಂಡರು. ತಮ್ಮ ಜೊತೆಯ 'ಇಂಗ್ಲಿಷ್ ಅಧ್ಯಾಪಕ–ಕನ್ನಡ ಲೇಖಕ'ರಿಗಿಂತ ಭಿನ್ನವಾಗಿ, ವಿದ್ವತ್ತಿನ ಆಳ–ಅಗಲಗಳೆರಡನ್ನೂ ಪಡೆದುಕೊಂಡರು. ಬ್ರಿಟಿಷ್–ಅಮೆರಿಕನ್ ವಿದ್ವತ್ತಿಗೆ ಸೀಮಿತವಾಗದೆ ಯೂರೋಪ್, ಲ್ಯಾಟಿನ್ ಅಮೆರಿಕನ್ ಮತ್ತು ಆಫ್ರಿಕನ್ ಸಾಹಿತಿಗಳ, ಚಿಂತಕರ ಬರವಣಿಗೆಯನ್ನೂ ಓದಿಕೊಂಡರು. ಈ ಓದು ಸಾಹಿತ್ಯದ ಕೇಂದ್ರದ ಸುತ್ತಲೂ ಹರಡಿಕೊಂಡಿತ್ತು. ಅವರು ಸಮಾಜವಿಜ್ಞಾನ ಮತ್ತು ಮಾನವಿಕಗಳನ್ನು ನೇರವಾಗಿ ಬಳಸಿಕೊಳ್ಳಲಿಲ್ಲ. ಆದರೆ, ಅವರ ಓದು ಬರಹಗಳು, ಅಕಡೆಮಿಕ್ ಸಾಹಿತ್ಯವಿಮರ್ಶೆಗೆ ಬೇಕಾದ ತಾತ್ವಿಕತೆ, ಉಪಕರಣಗಳು, ಶಿಸ್ತು, ಪರಿಶ್ರಮ ಮತ್ತು ವಸ್ತುನಿಷ್ಠೆಯನ್ನು ಕೊಡುವುದರಿಂದ ಅವರನ್ನು ಕನ್ನಡದ ಕೆಲಸಕ್ಕೆ ಅಣಿಗೊಳಿಸಿದವು. ಆದರೂ 1985ರಲ್ಲಿ ಮೇಷ್ಟ್ರ ಕೆಲಸದಿಂದ ನಿವೃತ್ತರಾಗುವವರೆಗೂ ಅವರು ಕನ್ನಡ ಬರವಣಿಗೆಯಲ್ಲಿ ತೊಡಗಿಕೊಂಡಿದ್ದು ಬಹಳ ಕಡಿಮೆ. ಎರಡೋ ಮೂರೋ ಪುಸ್ತಕಗಳಷ್ಟೇ ಬಂದಿದ್ದವು. ಗುಜರಾತಿನಲ್ಲಿದ್ದು ಇಂಗ್ಲಿಷ್ ಕಲಿಸುತ್ತಿದ್ದರೂ ಮನೋಹರ ಗ್ರಂಥಮಾಲೆಯ ಮೂಲಕ ಕನ್ನಡದ ನಂಟನ್ನು ಉಳಿಸಿಕೊಂಡಿದ್ದ ಕೀರ್ತಿನಾಥ ಕುರ್ತಕೋಟಿಯವರಿಗೆ ಹೋಲಿಸಿದರೆ, ಆಮೂರರು ಎಲ್ಲ ಸಿದ್ಧತೆಗಳಿದ್ದರೂ ಕನ್ನಡ ಪರಿಸರಕ್ಕೆ ಆಗಂತುಕರಾಗಿಯೇ ಉಳಿದಿದ್ದರು. ಆದರೆ, ಧಾರವಾಡಕ್ಕೆ ಮರಳಿ ಬಂದ ಮೇಲೆ ಅವರು ಕನ್ನಡ ಬರವಣಿಗೆಯಲ್ಲಿ ತೊಡಗಿಸಿಕೊಂಡ ಪರಿ ಅ–ಸಮಾನವಾದುದು, ನನ್ನಂತಹ ಸೋಮಾರಿಗಳಿಗೆ ಮಾದರಿಯಾದುದು.

ಕನ್ನಡದ ಪ್ರಮುಖ ನವ್ಯಲೇಖಕರ ಸಮಕಾಲೀನರೂ ಗೆಳೆಯರೂ ಆದ ಆಮೂರರು ಆ ಚಳವಳಿಯ ಅಥವಾ ಬೇರೆ ಯಾವುದೇ ಚಳವಳಿಯ ವಕ್ತಾರರಾಗಿ ತಮ್ಮನ್ನು ಗುರುತಿಸಿಕೊಳ್ಳಲಿಲ್ಲ. ನಿರ್ದಿಷ್ಟವಾದ ಸಾಮಾಜಿಕ/ರಾಜಕೀಯ ನಿಲುವುಗಳ ಬಗೆಗಿನ ಒಲವು, ಓಲುವೆಗಳನ್ನು ಬಹಿರಂಗವಾಗಿ ತೋರಿಸಲಿಲ್ಲ. ಹಾಗೆಯೇ ಯಾವುದೋ ಒಬ್ಬ ಸಾಹಿತಿಯ ಪರವಾದ ಪ್ರೀತಿಯು ಬೇರೆ ಲೇಖಕರನ್ನು ಓದಲು, ಅವರ ಬಗ್ಗೆ ಬರೆಯಲು ಅಡ್ಡಗೋಡೆಯಾಗದಂತೆ ಅವರು ನೋಡಿಕೊಂಡರು. ಬೇಂದ್ರೆ, ಕುವೆಂಪು, ಅ.ನ.ಕೃ., ಶ್ರೀರಂಗ, ಅನಂತಮೂರ್ತಿ ಮುಂತಾದವರ ಬಗ್ಗೆ ಪುಸ್ತಕಗಳನ್ನೇ ಬರೆದರೂ ಅವರನ್ನು ಯಾವುದೇ 'ಪಾಳೆಯ'ದ ಜೊತೆಗೆ ಅಥವಾ ಒಬ್ಬ ಲೇಖಕನ ಜೊತೆಗೆ ಗುರುತಿಸಲು ಸಾಧ್ಯವಿಲ್ಲ. ಅಂತೆಯೇ ಅವರು ಸಾಹಿತ್ಯ ಪರಂಪರೆ ಮತ್ತು ಸಾಹಿತ್ಯ ವಿಮರ್ಶೆಯ ಪರಂಪರೆಗಳನ್ನು ಆಧುನಿಕ ಕನ್ನಡದ ಸಾಹಿತ್ಯಮಟ್ಟಿಗಾದರೂ ಒಳಗೊಂಡರು, ಗೌರವದಿಂದ ಬಳಸಿಕೊಂಡರು. ಇದು 'ಎಲ್ಲವೂ ನನ್ನಿಂದಲೇ ಮೊದಲಾಗುತ್ತಿದೆ' ಎನ್ನುವ ಧೋರಣೆಗಿಂತ ಭಿನ್ನವಾದುದು. ಹಾಗೆಯೇ ಕಿರಿಯರು ಬರೆದುದನ್ನೂ ಕುತೂಹಲದಿಂದ ಗಮನಿಸಿ ಬರೆಯುತ್ತಿದ್ದರು. ಅವರ ವಿಸ್ತೃತವಾದ ಓದು ಸಾಹಿತ್ಯದ ಆಕೃತಿ, ಆಶಯ ಮತ್ತು ಅವುಗಳ ನಡುವಿನ ಒಳಸಂಬಂಧಗಳನ್ನು ಅಧ್ಯಯನ ಮಾಡುವ ಬಗೆಯನ್ನು ಅವರಿಗೆ ಕಲಿಸಿತ್ತು. ಕನ್ನಡ ಸಾಹಿತ್ಯ ಕೃತಿಗಳನ್ನು ಜಗತ್ತಿನ ಅತ್ಯುತ್ತಮ ಬರವಣಿಗೆಯ ಹಿನ್ನೆಲೆಯಲ್ಲಿ ನೋಡುತ್ತಿದುದರಿಂದ ಅವರ ಬರವಣಿಗೆಯಲ್ಲಿ ಅತಿರೇಕ, ಅತ್ಯುಕ್ತಿಗಳು ಇರುತ್ತಿರಲಿಲ್ಲ. ರೂಪಕಗಳನ್ನು ಪ್ರತಿಮೆಗಳನ್ನು ಬಳಸಿ